<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಬಾಗಲಕೋಟೆ</u>
<u>ಸಂಚಾರಿ ನ್ಯಾಯಾಲಯ ಗುಳೇದಗುಡ್ಡ</u>

ಸಿ.ಸಿ ನಂ.718/2019

| | | |
|---|---|---|
| ಸಾಕ್ಷಿಯ ಹೆಸರು | : ಶಿವಕುಮಾರ ಕೂಟಕನಕೇರಿ | ಸಿಡಬ್ಲ್ಯು-10 |
| ತಂದೆಯ ಹೆಸರು | : ಮಾಗೊಂಡಪ್ಪ | ಪಿಡಬ್ಲ್ಯು-4 |
| ವಯಸ್ಸು | : 27 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಾಸಸ್ಥಳ | : ಕೋಟೆಕಲ್ಲ | |

<u>ದಿನಾಂಕಃ 03-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ರವರಿಂದಃ-</u>

ಚಾಸಾ-1, 9 ಹಾಗೂ 11 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ನನಗೆ ಇರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

<u>(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಸಅ ರವರು ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಅನುಮತಿಯನ್ನು ನೀಡಲಾಯಿತು.)</u>

<u>ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ರವರಿಂದಃ-</u>

ದಿ.4-08-2019 ರಂದು ಸಾಯಂಕಾಲ 4-26 ರಿಂದ 4-40 ನಡುವೆ ಆರೋಪಿಯು ನಮ್ಮ ಮನೆಯ ಬಳಿ ಬಂದು ನನ್ನ ಹೆಂಡತಿಗೆ ಪೋನ ಮಾಡಬೇಕೆಂದು ಪೋನ ಕೇಳಿರುತ್ತಾನೆ ಎಂದರೆ ಸರಿಯಲ್ಲ. ನಮ್ಮಿಂದ ಪೋನ ಪಡೆದುಕೊಂಡು ಪಿರ್ಯಾದಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಪೋನ ಪಡೆದು ಇದರ ಕುರಿತು ವಿಚಾರಿಸಲಾಗಿ ಸದರಿ ಆರೋಪಿಯು ಚಾಸಾ-1 ರವರಿಗೆ ಕರೆ ಮಾಡಿರುತ್ತಾನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ರಾತ್ರಿ 9-30 ಗಂಟೆಯ ಸುಮಾರಿಗೆ ಆರೋಪಿಯು ಚಾಸಾ-1 ರವರ

ಮನೆಗೆ ಹೋಗಿ ಅವಾಚ್ಯ ಶಬ್ದಗಳಿಂದ ಬೈದು ಜೀವದ ಧಮಕಿ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-9 ರವರು ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯು ಚಾಸಾ-3 ರವರ ಮನೆಗೆ ಹೋಗಿ ಅವಾಚ್ಯ ಶಬ್ದಗಳಿಂದ ಬೈದಾಡಿ ನಿಂದನೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮೊಬೈಲ ನಂ.9008448024 ಇರುತ್ತದೆ ಎಂದರೆ ಸರಿಯಲ್ಲ. ಅದೇ ನಂಬರದಿಂದ ಸದರಿ ಆರೋಪಿಯು ಕರೆ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ದಿ.05.08.2019 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-5 ಎಂದು ನಿಶಾನೆಗೊಳಿಸಲಾಯಿತು. ಈ ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ-</u>

ಏನೂ ಇರುವುದಿಲ್ಲ.

<u>ಮರುವಿಚಾರಣೆ : ಇರುವುದಿಲ್ಲಾ.</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ.ಸರಿ ಅದೆ. ನನ್ನ ಸಮಕ್ಷಮ

ಸಹಿ/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಬಾಗಲಕೋಟ
ಸಂಚಾರಿ ನ್ಯಾಯಾಲಯ ಗುಳೇದಗುಡ್ಡ